**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.**

**ಸಿಸಿಃ 1014/2016**

| | | |
|---|---|---|
| ಹೆಸರು | ಗೌರಮ್ಮ | ದಿಃ 23-09-2025 |
| ಗಂಡನ ಹೆಸರು | ಅಶೋಕ | |
| ವಯಸ್ಸು | 46 ವರ್ಷ | ಪಿಡಬ್ಲ್ಯೂಃ 7 |
| ಉದ್ಯೋಗ | ಕೂಲಿ | ಸಿಡಬ್ಲ್ಯೂಃ 11 |
| ವಾಸ | ಅನುಘಟ್ಟ ಗ್ರಾಮ | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 10 ರವರ ಪರಿಚಯ ಇರುತ್ತದೆ.

ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಗಲಾಟೆಯನ್ನು ನೋಡಿದ್ದೇನೆ ಎಂದು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ **ರವರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾ**ಯಿತು.**)**

**ಪಾಟೀಸವಾಲುಃ ಮಾನ್ಯ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಅನುಘಟ್ಟ ಗ್ರಾಮದ ಸರ್ವೆ ನಂ. 61/1 ರ ಚಾಸಾ-12 ಕಾಂತರಾಜು ರವರಿಗೆ ಸೇರಿದ ಜಮೀನಿನಲ್ಲಿ 1ನೇ ಆರೋಪಿಯ ಗಂಡ 1993 ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದಾಗ ಸಾರ್ವಜನಿಕರ ಅವಶ್ಯಕತೆಗಾಗಿ ಸರ್ಕಾರದ ವತಿಯಿಂದ ಒಂದು ಕೊಳವೆ ಬಾವಿಯನ್ನು ನಿರ್ಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬೋರ್ ವೆಲ್ ರಿಪೇರಿಗೆ ಬಂದಿದ್ದು ರಿಪೇರಿ ಮಾಡಿಸುವ ಸಲುವಾಗಿ ಚಾಸಾ-1 ರವರು ಹೋದಾಗ 1ನೇ ಆರೋಪಿಯ ಗಂಡ ಸದರಿ ಬೋರ್ ವೆಲ್ ಗೆ ಮೋಟಾರು ಅಳವಡಿಸಿ ನೀರನ್ನು ತನ್ನ ಸ್ವಂತಕ್ಕೆ ಬಳಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ದಿಃ30-01-2016 ರಂದು ಬೆಳಿಗ್ಗೆ ಕಾರ್ಯ ನಿರ್ವಾಹಕ ಅಧಿಕಾರಿಯಾದ ಚಾಸಾ-7 ರವರು ಸ್ಥಳಕ್ಕೆ ಬರುವುದಾಗಿ ತಿಳಿಸಿದ್ದು ನನಗೂ ಬರುವಂತೆ ಚಾಸಾ-1 ರವರು ಹೇಳಿದಾಗ ನಾನು, ಚಾಸಾ-2 ರಿಂದ 10 ರವರೊಂದಿಗೆ ಸ್ಥಳಕ್ಕೆ ಹೋಗಿದ್ದು ಚಾಸಾ-7 ರವರು ಸಾರ್ವಜನಿಕರಿಗೆ ಇರುವ ಸರ್ಕಾರಿ ಬೋರ್ ವೆಲ್ ನ್ನು ಏಕೆ ನಿಮ್ಮ ಪಂಪ್ ನ್ನು ಇಳಿಸಿ ನೀರನ್ನು

ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಸರ್ಕಾರಿ ಕೆಲಸ ಮಾಡದಂತೆ ಅಡ್ಡಿ ಪಡಿಸಿದರು ಎಂದರೆ ಸರಿಯಲ್ಲ. ದಿ:23-03-2016 ರಂದು ಸಂಜೆ 5.00 ಗಂಟೆಗೆ ನಾನು ಮತ್ತು ಚಾಸಾ-6 ರವರು ಮೋಟಾರನ್ನು ಅಳವಡಿಸಲು ಹೋದಾಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಬೋರ್ ವೆಲ್ ಗೆ ಕಲ್ಲುಗಳನ್ನು ಹಾಕಿ ತುಂಬಿ ನಷ್ಟ ಉಂಟು ಮಾಡಿದ್ದರು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ವಿಚಾರಗಳು ತಿಳಿದಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ
ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ಬೇಲೂರು.**